ಪಾಲೂ ಬೇಡ. ನಂಗೆ ಕೊಟ್ಟರೂ ಟೂ ಎಲ್‌ಕೆ ಬಗ್ಗೆ ನಂಗೇನೂ ನೆನಪಿಲ್ಲ. ಹಂಗೇನಾದ್ರೂ ಇದ್ರೆ ವಾಪಸ್ಸು ಮಾಡ್ತೀನಿ..." ಎಂದು ಕಡತವನ್ನು ಡ್ರಾಯರ್ ಒಳಕ್ಕೆ ಹಾಕಿದ್ದೆ. "ಸಾರ್..." ದಢಕ್ಕನೆ ಎದ್ದು ನಿಂತ ಪವನ್‌ಕುಮಾರ್. "ಹೌದು ಪವನ್‌ಕುಮಾರ್, ಇನ್ಮೇಲೆ ನಾನು ಕ್ಲೀನಾಗಿರ್ಬೇಕು ಅಂತ ತೀರ್ಮಾನ ಮಾಡ್ಕೊಂಡಿದ್ದೀನಿ..." ಎಂದಿದ್ದೆ. ಪಿವೋನ್ ತಂದಿಟ್ಟ ಕಾಫಿಯನ್ನು ಕುಡಿಯುವಾಗ ಪವನ್‌ಕುಮಾರ್ ಕೈ ಸ್ವಲ್ಪ ಶೇಕ್ ಆಗುತ್ತಿರುವುದು ನನ್ನ ಕಣ್ಣಿಗೆ ಬಿದ್ದಿತ್ತು. ಪಿವೋನ್ ಕೂಡ ಎಂದಿನಂತೆ ನಾರ್ಮಲ್ ಆಗಿ ಇಲ್ಲದಿರುವುದು, ನನ್ನನ್ನು ಅನುಮಾನದಿಂದ ನೋಡುತ್ತಿರುವುದು ನನ್ನ ಗಮನಕ್ಕೆ ಬಂದಿತ್ತು.

ಪವನ್‌ಕುಮಾರ್ ಎದ್ದು ಹೋದ ಮೇಲೆ ನನ್ನ ಅಭಿಪ್ರಾಯ ಮತ್ತು ಸಹಿಗಾಗಿ ಬಂದಿದ್ದ ಫೈಲುಗಳ ಮೇಲೆ ಕಣ್ಣಾಡಿಸತೊಡಗಿದ್ದೆ. ಐದಾರು ಫೈಲುಗಳನ್ನು ವಿವರವಾಗಿ ಓದತೊಡಗಿದ್ದೆ. ಒಂದಲ್ಲಾ ಒಂದು ತಪ್ಪುಗಳು, ಎಡವಟ್ಟುಗಳು ಕಾಣಿಸತೊಡಗಿದ್ದವು. ಇಷ್ಟು ದಿನಗಳಲ್ಲಿ ನಾನು ಹೀಗೆ ಸೀರಿಯಸ್ಸಾಗಿ ಕಡತಗಳನ್ನು ಸ್ಟಡಿ ಮಾಡಿದವನೇ ಅಲ್ಲ. ಲ್ಯಾಂಡ್ ಫೋನ್ ರಿಂಗಾಗಿತ್ತು. ಫೋನ್ ಎತ್ತಿ ಹಲೋ ಎಂದಿದ್ದೆ. ಆ ಕಡೆಯಿಂದ ಕೈಗಾರಿಕಾ ಇಲಾಖೆಯ ಡೆಪ್ಯುಟಿ ಸೆಕ್ರೇಟರಿ ಗಂಗಾಧರ ಮೂರ್ತಿ ಮಾತನಾಡುತ್ತಿದ್ದ. ಈತ ನನ್ನ ಬ್ಯಾಚ್‌ಮೇಟ್ ಮತ್ತು ಕ್ಲೋಸ್ ಫ್ರೆಂಡ್ ಸರ್ಕಲ್‌ನಲ್ಲಿ ಒಬ್ಬ. ವೆಜಿಟೇರಿಯನ್ ಆದರೂ ಡೈಲಿ ನಾನ್‌ವೆಜ್ ಬೇಕು. ಬೆಂಗಳೂರಿನಲ್ಲಿ ಅಲ್ಲದೆ ಬೇರೆ ಬೇರೆ ಪಟ್ಟಣಗಳಲ್ಲೂ ಸುಮಾರು ಸೈಟುಗಳನ್ನು ಬೇನಾಮಿ ಹೆಸರಿನಲ್ಲಿ ಮಾಡಿದ್ದಾನಂತೆ. ನಮ್ಮ ಅಂಡರ್ ಸೆಕ್ರೇಟರಿ ಪವನ್‌ಕುಮಾರ್ ಇವನ ಕೈಕೆಳಗೂ ಕೈಗಾರಿಕಾ ಇಲಾಖೆಯಲ್ಲಿ ಕೆಲಸ ಮಾಡಿದ್ದಾನೆ. "ತಾಜ್‌ನಿಂದ ಮಟನ್ ಬಿರಿಯಾನಿ ತರಿಸ್ತಿದ್ದೀನಿ, ನಿಂಗೂ ಅರ್ಧ ಕಳಿಸ್ಲಾ..." ಎಂದಿದ್ದ. "ಬೇಡ, ಯಾಕೊ ನಾನ್ ವೆಜ್ ಬಿಟ್ ಬಿಡೋಣ ಅನ್ನಿಸ್ತಾ ಇದೆ..." ಎಂದೆ. "ಏನಪ್ಪಾ ಗಾಂಧಿ ನೀನೇನು ಒರಿಜಿನಲ್ ಗಾಂಧಿ ಆಗ್ಬೇಕು ಅಂತ ಮಾಡಿದ್ದೀಯೋ ಹೇಗೆ? ಹುಷಾರ್ ಗಿಷಾರ್ ತಪ್ಪಿದ್ದೀಯಾ..." ತಮಾಷೆ ಮಾತನ್ನಾಡಿದ್ದ. "ಹಂಗೇನಿಲ್ಲ..." ಮಾತು ತೇಲಿಸಿದ್ದೆ. "ಹಾಂ, ನಿಮ್ಮ ಅಂಡರ್ ಸೆಕ್ರೇಟರಿ ಫೋನ್ ಮಾಡಿದ್ದ. ಅದೇನೋ ವಿಚಿತ್ರ ಮೂಡ್‌ನಲ್ಲಿದ್ದೀಯಂತೆ. ನೋಡೋಕೂ ಮಾಮೂಲಿಯಾಗಿಲ್ವಂತೆ. ಏನ್ ಕಥೆ. ಅದ್ಯಾವ್ದೊ ಫೈಲ್ ಕ್ಲಿಯರ್ ಮಾಡಿ ಕಳಿಸ್ಬಿಡು. ಸೆಕ್ರೇಟರಿ ರೆಡಿ ಇದಾರಂತೆ. ಪಾಪ, ಪವನ್‌ಕುಮಾರ್ ಕಮಿಟ್ ಆಗ್ಬಿಟ್ಟವ್ನಂತೆ. ನಿಂದೇನು ಉಸಾಬರಿ..." ಎನ್ನುತ್ತಿದ್ದವನ ಮಾತುಗಳನ್ನು "ನಾಳೆ ಮಾತನಾಡ್ತೀನಿರು..." ಎಂದು ಕಟ್ ಮಾಡಿದ್ದೆ.

ಮನಸ್ಸು ದೇಹ ಒಂದನ್ನೊಂದು ಬೇರ್ಪಟ್ಟಂತೆ, ಮತ್ತೆ ಒಂದನ್ನೊಂದು ಸೇರಿಕೊಂಡಂತೆ ವಿಚಿತ್ರ ಅನುಭವ. ಒಮ್ಮೊಮ್ಮೆ ತೊಳಲಾಟ, ಒಮ್ಮೊಮ್ಮೆ ಖುಷಿ. ಪ್ರತಿಯೊಂದು ವಿಷಯದಲ್ಲೂ ನಾನಾ ಅಭಿಪ್ರಾಯಗಳು ಮೂಡಿದಂತೆ. ಅಷ್ಟರಲ್ಲಿ ಮೊಬೈಲ್‌ನಲ್ಲಿ ಹೆಂಡತಿಯ ಹೆಸರು. "ಹಲೋ..." ಎಂದಿದ್ದೆ. "ಏನ್ರಿ ಆರಾಮಾಗಿದ್ದೀರಾ ಈಗ..." ಸ್ವಲ್ಪ ಗಾಬರಿ ಇತ್ತು. "ಇಷ್ಟಕ್ಕೂ ನಂಗೆ ಏನಾಗಿದೆ ಅಂಥಾದ್ದು..." ತುಸು ಸಿಟ್ಟಿನಿಂದಲೇ ಹೇಳಿದ್ದೆ. "ಎಂದೂ ಇಲ್ದೋರು ಇವೊತ್ತು ಯಾಕಿಷ್ಟು ಕೋಪದಲ್ಲಿದ್ದೀರಿ. ಸಂಜೆಗೆ ಬೇಗ ಬನ್ನಿ ಕೆಂಗೇರಿಯ ಸಾಯಿಬಾಬಾ ದೇವಸ್ಥಾನಕ್ಕೆ ಹೋಗಿ ಬರೋಣ. ಅಲ್ಲಿಗೆ ಹೋಗಿ ತಿಂಗಳ ಮೇಲಾಯ್ತು..." ಎಂದು ಫೋನ್ ಇಟ್ಟಿದ್ದಳು. ನನ್ನ ಹೆಂಡತಿ ಶಿರಡಿ ಸಾಯಿಬಾಬಾನ ಪರಮ ಭಕ್ತೆ. ನನಗೆ ಎರಡು ಬಾರಿ ಪ್ರಮೋಶನ್ ಆದಾಗಲೂ ತಾನೇ ಬಲವಂತದಿಂದ ಶಿರಡಿಗೆ ಕರೆದುಕೊಂಡು ಹೋಗಿದ್ದಳು. ಹಾಗಾಗಿ ನನಗೂ ಬಾಬಾ ಬಗ್ಗೆ ಭಕ್ತಿ ಮೂಡಿದೆ. ಕೆಲವು ಪ್ರಗತಿಪರ ಸ್ನೇಹಿತರು, "ಅಲ್ರೊ ಗಾಂಧಿ ಅಂತ ಹೆಸರಿಟ್ಕಂಡಿದ್ದೀಯ